ದಿನಾಂಕಃ 07-07-2026.

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ವಾದಿ ಪರ ಶ್ರೀ SVK ಮಾನ್ಯ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

2. ದಿಃ 26-07-2016 ರಂದು ನೊಂದಣಿಯಾಗಿರುವ ಖರೀದಿ ಕರಾರು ಪತ್ರವನ್ನು ನಿಪಿ.1 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.1 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ.1(ಎ), ಹಾಗೂ 1 ನೇ ಪ್ರತಿವಾದಿಯ ಯಜಮಾನರಾದ ಅಮರೇಶ ಇವರ ಸಹಿಯನ್ನು ನೋಡಿ ಗುರುತಿಸಿದ್ದು ಈಗ ನಿಪಿ.1 ಬಿ, ಸಾಕ್ಷಿಯು ನಿಪಿ.1 ರ ಮೇಲಿರುವ ಸಾಕ್ಷಿಗಳಾದ ಶ್ರೀ ಯಂಕಪ್ಪ ತಂದೆ ಕೃಷ್ಣಪ್ಪ ಬಿಳಿಗೇರ ಹಾಗೂ ಶ್ರೀ ಅಮಲಪ್ಪ ತಂದೆ ಗೋಪಣ್ಣ ಕೊಡಚಿ ಹಾಗೂ ಬರಹಗಾರರಾದ ಶ್ರೀ ಕಾಳಹಸ್ತಿ ಬೀ ವಿಶ್ವಕರ್ಮ ಇವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.1(ಸಿ) ದಿಂದ 1(ಇ) ಎಂದು ಗುರುತಿಸಲಾಯಿತು. ಸದರಿ ಸಾಕ್ಷಿಯಾದ ಅಮರಪ್ಪ ಇವರು ಈಗ್ಗೆ 01 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ಸಾಕ್ಷಿಯು ನಿಪಿ.1 ರ ಮೇಲಿರುವ ತಮ್ಮ ಪೊಟೋವನ್ನು ನೊಡಿ ಗುರುತಿದ್ದು ಅದನ್ನು ಈಗ ನಿಪಿ.1 ಎಫ್ ಹಾಗೂ 1 ನೇ ಪ್ರತಿವಾದಿಯ ಯಜಮಾನರ ಪೊಟೋವನ್ನು ನಿಪಿ.1 ಜಿ ಎಂದು ಗುರುತಿಸಲಾದವು. ಸನ್ 2022 ರಿಂದ 2024 ನೇ ಸಾಲಿನ ಸ.ನಂ.286/5 ರ RTC ನ್ನು ನಿಪಿ.2, ದಿಃ 30-05-2024 ರಂದು ಪ್ರತಿವಾದಿಗಳಿಗೆ ಕಳುಹಿಸಿರುವ ತಿಳುವಳಿಕೆ ಪತ್ರದ

ಕಚೇರಿ ನಕಲನ್ನು ನಿಪಿ.3, ಒಂದು ಅಂಚೆ ರಶೀದಿಯನ್ನು ನಿಪಿ.4 ಎಂದು ಗುರುತಿಸಲಾದವು. ನನ್ನ ದಾವೆಯನ್ನು ನಾನ ಕೇಳಿರುವಂತೆ ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**2 ರಿಂದ 5 ನೇ ಪ್ರತಿವಾದಿಗಳ ಪರ ಮಾನ್ಯ ವಕೀಲರು ಸಾಕ್ಷಿಯ ಪಾಟಿ ಸವಾಲು ಮಾಡಲು ವೇಳೆ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.